# ಪ್ರಳಯದ ಪ್ರಹಸನ

ಅರೆಬರೆಯಾಗಿ ವಿಜ್ಞಾನವನ್ನೂ, ಪೂರ್ತಿಯಾಗಿ ಜೋತಿಷ್ಯವನ್ನೂ, ಅನುಮಾನದಿಂದಲೇ ಧರ್ಮಗುರುಗಳನ್ನೂ ನಂಬುವ ಜನಸಾಮಾನ್ಯರು, ಈ 'ಮಾಧ್ಯಮ ಪ್ರಳಯ'ಕ್ಕೆ ಸಿಕ್ಕು ಗೊಂದಲಗಳನ್ನು ಇನ್ನಷ್ಟು ಹೆಚ್ಚಿಸಿಕೊಂಡಿದ್ದಾರೆ.

ಹಲವು ತಿಂಗಳುಗಳಿಂದ ಜಗತ್ತಿನ ಉದ್ದಗಲಕ್ಕೂ ಪ್ರಳಯ ಭೀತಿ ಹಬ್ಬಿದೆ. ಡಿಸೆಂಬರ್ 21ರಂದು ಪ್ರಳಯ ಸಂಭವಿಸಿ ಇಡೀ ಜಗತ್ತು ವಿನಾಶಕ್ಕೊಳಗಾಗುತ್ತದೆ ಎನ್ನುವ ನಂಬಿಕೆ, ಭಯ ವ್ಯಾಪಕವಾಗಿ ಆವರಿಸಿದೆ. ಈ ಭಯವನ್ನು ಸಾರ್ವತ್ರಿಕಗೊಳಿಸಿ ಜನರನ್ನು ಆತಂಕಕ್ಕೆ ದೂಡುವಲ್ಲಿ ಮಾಧ್ಯಮಗಳ ಪಾತ್ರವೂ ಪ್ರಮುಖವಾಗಿದೆ. 'ಮಾಯನ್ ಕ್ಯಾಲೆಂಡರ್ ಪ್ರಕಾರ, ಡಿಸೆಂಬರ್ 21 ಭೂಮಿಯ ಕೊನೆಯ ದಿನ. ಅವತ್ತು ಪ್ರಾಕೃತಿಕ ವಿಪತ್ತುಗಳು ಎರಗಿ ಜಗತ್ತಿನಾದ್ಯಂತ ವಿನಾಶ ನಡೆಯಲಿದೆ' ಎಂದು ಮೊತ್ತಮೊದಲು ಯಾರು ಬಹಿರಂಗಪಡಿಸಿದರೋ ಗೊತ್ತಿಲ್ಲ; ಜನರೆಲ್ಲ ಹುಚ್ಚರಂತೆ ಈ ಭವಿಷ್ಯವಾಣಿಯನ್ನು ನಂಬಿಬಿಟ್ಟಿದ್ದಾರೆ. ಎಲ್ಲೆಡೆ ಇದರ ಚರ್ಚೆಯೇ ನಡೆದಿದೆ. ವಿಷಯದ ಬಗ್ಗೆ ಅಲ್ಪ ಸ್ವಲ್ಪ ಗೊತ್ತಿರುವವರೆಲ್ಲ ತಮ್ಮದೇ ಆದ ರೀತಿಯಲ್ಲಿ ಈ 'ಮಾಯನ್ ಪ್ರಳಯ'ವನ್ನು ತಮ್ಮ ಮೂಗಿನ ನೇರಕ್ಕೆ ವ್ಯಾಖ್ಯಾನ ಮಾಡುತ್ತಿದ್ದಾರೆ.

ದಿನದ 24 ಗಂಟೆಯೂ ಟೀವಿಯಲ್ಲಿ ಏನನ್ನಾದರೂ ತೋರಿಸಲೇಬೇಕಿರುವ ಮತ್ತು ಹಾಗೆ ತೋರಿಸುವ ವಿಷಯಗಳು ಜನರಲ್ಲಿ ಕುತೂಹಲವನ್ನು ಕೆರಳಿಸಲೇಬೇಕಾದ ಅನಿವಾರ್ಯತೆ ಇರುವ ಟೀವಿ ವಾಹಿನಿಗಳೂ 'ಪ್ರಳಯ ಸಂತೋಷ' ಅನುಭವಿಸುತ್ತಿವೆ. ಟೀವಿ ಸ್ಟುಡಿಯೋಗಳಲ್ಲಿ ಜೋತಿಷಿಗಳಿಗೆ, ಶಾಸ್ತ್ರ ಹೇಳುವವರಿಗೆ ಭರ್ಜರಿ ಬೇಡಿಕೆ! 'ಪ್ರಳಯ ಎಂದರೆ ಏನು? ಹೇಗೆ ಸಂಭವಿಸುತ್ತದೆ? ಅದರಿಂದ ತಪ್ಪಿಸಿಕೊಳ್ಳಲು ಏನೇನು ಮಾಡಬೇಕು? ಯಾವ ಮಂತ್ರಗಳನ್ನು ಪಠಿಸಿದರೆ ಪ್ರಳಯದ ಪರಿಣಾಮ ಕಡಿಮೆಯಾಗುತ್ತದೆ?' ಮುಂತಾಗಿ ಪಾಂಡಿತ್ಯಪೂರ್ಣ ಚರ್ಚೆಗಳು ನಡೆದಿವೆ. ನಡುನಡುವೆ ವಿಜ್ಞಾನಿಗಳು, ವಿಚಾರವಾದಿಗಳು ಮತ್ತು ಧರ್ಮಗುರುಗಳೂ ಈ ಚರ್ಚೆಗೆ ಸೇರಿಕೊಂಡು 'ನಿಜವಾಗಿಯೂ ಪ್ರಳಯ ಸಂಭವಿಸಿಯೇ ಬಿಡುತ್ತೇನೋ' ಎಂಬಂತಹ ಗಂಭೀರ ವಾತಾವರಣವನ್ನು ನಿರ್ಮಾಣ ಮಾಡಿದ್ದಾರೆ. ಅರೆಬರೆಯಾಗಿ ವಿಜ್ಞಾನವನ್ನೂ, ಪೂರ್ತಿಯಾಗಿ ಜೋತಿಷ್ಯವನ್ನೂ, ಅನುಮಾನದಿಂದಲೇ ಧರ್ಮಗುರುಗಳನ್ನೂ ನಂಬುವ ಜನಸಾಮಾನ್ಯರು, ಈ 'ಮಾಧ್ಯಮ ಪ್ರಳಯ'ಕ್ಕೆ ಸಿಕ್ಕು ಗೊಂದಲಗಳನ್ನು ಇನ್ನಷ್ಟು ಹೆಚ್ಚಿಸಿಕೊಂಡಿದ್ದಾರೆ. 'ಸಮಾಜ ಸೇವೆ'ಯಲ್ಲಿ ಆಸಕ್ತಿ ಇರುವ ನೂರಾರು 'ಗಣ್ಯ'ರು ಈಗಾಗಲೆ ಸಾರ್ವಜನಿಕರಿಂದ ದೇಣಿಗೆ ಎತ್ತಿಯೋ, ತಮ್ಮಲ್ಲಿರುವ ಸಂಗ್ರಹಿತ ಧನದಿಂದಲೋ ಅಲ್ಲಲ್ಲಿ ಹೋಮ, ಹವನ, ಪೂಜೆ, ಪುನಸ್ಕಾರ, ಸಾಮೂಹಿಕ ಪ್ರಾರ್ಥನೆ ಏರ್ಪಡಿಸಿ ಸಮಾಜವನ್ನು ಪ್ರಳಯದಿಂದ ಪಾರು ಮಾಡಲು ಅಹರ್ನಿಶಿ ದುಡಿಯುತ್ತಿದ್ದಾರೆ!

'ಇನ್ನೇನು ಪ್ರಳಯ ಸಂಭವಿಸಲಿದೆ' ಎನ್ನುವ ಕಾರಣಕ್ಕಾಗಿ ಜನರಲ್ಲಿ ನೈತಿಕ ಮೌಲ್ಯಗಳು ಉನ್ನತ ಮಟ್ಟಕ್ಕೇರಿವೆಯೆ ಎಂದರೆ ಹಾಗೇನೂ ಕಾಣಿಸುತ್ತಿಲ್ಲ. ಕೊಲೆ, ಸುಲಿಗೆ, ವಂಚನೆಯ ಪ್ರಕರಣಗಳು ಎಂದಿನಂತೆ ಹೆಚ್ಚು ಹೆಚ್ಚಾಗಿ ವರದಿಯಾಗುತ್ತಿವೆ. ಆದರೆ ಇತರ ಭೋಗಭಾಗ್ಯ ಚಟುವಟಿಕೆಗಳ ಭರಾಟೆ ಕಡಿಮೆಯಾಗಿರುವಂತೆ ಕಾಣುತ್ತಿದೆ. ಕ್ರಿಸ್ಮಸ್ ರಜೆ ಮತ್ತು ಹೊಸ ವರ್ಷದ ಸಂಭ್ರಮ ಮುಗಿಲಿಗೇರುವ ಈ ಹೊತ್ತಲ್ಲಿ ರಾಜ್ಯದ ಪ್ರವಾಸಿ ಧಾಮಗಳಲ್ಲಿ ಜನರ ಓಡಾಟ ಹೆಚ್ಚಾಗಬೇಕಿತ್ತು. ಆದರೆ ಪ್ರವಾಸಿ ಸ್ಥಳಗಳೆಲ್ಲ ಥಂಡಾ ಹೊಡೆದಿವೆ. ಕಳೆದ ವರ್ಷ ಡಿಸೆಂಬರ್ ಹೊತ್ತಿಗೆ ತುಂಬಿ ತುಳುಕುತ್ತಿದ್ದ ಕೊಡಗಿನ ರೆಸಾರ್ಟ್‌ಗಳು ಈ ಸಲ ಬುಕಿಂಗ್ ಇಲ್ಲದೆ ಖಾಲಿ ಬಿದ್ದಿವೆ. ರಾಜ್ಯದ ಹಾಗೂ ದೇಶದ ಪ್ರವಾಸೋದ್ಯಮ ಕೇಂದ್ರಗಳಿಂದಲೂ ಈ ರೀತಿಯ ನಿರುತ್ಸಾಹದ ವರದಿಗಳು ಬರುತ್ತಿವೆ. 'ಮೊದಲು ಡಿ.21ರ ಪ್ರಳಯ ಮುಗಿಯಲಿ, ಆ ಬಳಿಕ ನೋಡೋಣ' ಎನ್ನುವ ಧೋರಣೆ ಜನರದ್ದು ಎನ್ನಲಾಗುತ್ತಿದೆ.

ಒಂದೆಡೆ ಸಮೂಹ ಮಾಧ್ಯಮಗಳು ಪ್ರಳಯದ 'ಸಮೂಹ ಸನ್ನಿ'ಯನ್ನು ಹರಡಿ ಜನಸಾಮಾನ್ಯರಲ್ಲಿ ಆತಂಕವನ್ನು ಹೆಚ್ಚಿಸುತ್ತಿದ್ದರೆ, ರಾಜ್ಯದಲ್ಲಿ ನಿಷ್ಕ್ರಿಯವಾಗಿರುವ ಸರಕಾರವು 'ಈ ವಿಷಯ ತನಗೆ ಸಂಬಂಧಿಸಿದ್ದೇ ಅಲ್ಲ' ಎಂಬಂತೆ ಕೈಕಟ್ಟಿ ಕುಳಿತಿದೆ. ಅಂದ ಹಾಗೆ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಎಲ್ಲಿದ್ದಾರೆ? ಕನಿಷ್ಠಪಕ್ಷ ಮಾಧ್ಯಮಗಳಲ್ಲಿ ಮುಖ ತೋರಿಸಿ ಈ ರೀತಿಯ ಗೊಂದಲಗಳನ್ನು ಖಂಡಿಸುವುದಾಗಲೀ, ಜನಸಾಮಾನ್ಯರಲ್ಲಿ ವೈಜ್ಞಾನಿಕ ಮನೋಭಾವವನ್ನು ಬಿತ್ತುವ ಕೆಲಸಗಳನ್ನು ಕೈಗೊಳ್ಳುವುದಾಗಲೀ ಮಾಡಬಹುದಿತ್ತಲ್ಲ? ಇಡೀ ಸರಕಾರವೇ 'ಹಾವೇರಿಯ ರಾಜಕೀಯ ಪ್ರಳಯ ಭೀತಿ'ಯಲ್ಲಿ ಇರುವುದರಿಂದ ಅವರಿಗೆ ಈ ಕಡೆಗೆ ಗಮನ ಹರಿಸಲು ಸಾಧ್ಯವಾಗಿಲ್ಲದಿರಬಹುದೆ?

ಇವೆಲ್ಲದರ ಮಧ್ಯೆ 'ಭಾರತ ಜ್ಞಾನ ವಿಜ್ಞಾನ ಸಮಿತಿ'ಯು ಡಿಸೆಂಬರ್ 21ಅನ್ನು 'ವೈಜ್ಞಾನಿಕ ಜನಜಾಗೃತಿ ದಿನ'ವನ್ನಾಗಿ ಆಚರಿಸಲು ನಿರ್ಧರಿಸಿರುವುದು ಸ್ವಾಗತಾರ್ಹ. ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಪ್ರಳಯದ ಕುರಿತು ಅರಿವಿನ ಕಾರ್ಯಾಗಾರಗಳನ್ನು ಸಮಿತಿ ನಡೆಸುತ್ತಿರುವುದೂ ಸಕಾಲಿಕ. ಎಲ್ಲ ಕ್ಷೇತ್ರಗಳಲ್ಲೂ ಸತ್ಯದಿಂದ ವಿಮುಖವಾದ ಉತ್ಪ್ರೇಕ್ಷೆಯ, ವೈಭವೀಕರಣದ ಜಾಡ್ಯ ಹಬ್ಬುತ್ತಿರುವ ಈ ದಿನಗಳಲ್ಲಿ ಜನರು ಮೂಢನಂಬಿಕೆಗಳಲ್ಲಿ ಕಳೆದುಹೋಗದೆ ವೈಜ್ಞಾನಿಕ ಅರಿವನ್ನು ಹೆಚ್ಚಿಸಿಕೊಳ್ಳುವುದಕ್ಕೆ ಪೂರಕವಾದ ಕೆಲಸಗಳು ಆಗಬೇಕಾಗಿರುವುದು ಈಗಿನ ತುರ್ತು ಅಗತ್ಯ.

■ ಬಿ.ಎಂ.ಹನೀಫ್



ವಿಷ್ಣುಕುಮಾರ್